ದೇವಾಲಯಕ್ಕೆ ಸಂಬಂಧಿಸಿದ ಜಮೀನುಗಳ ಮಾರಾಟ ಗುತ್ತಿಗೆ ನೀಡುವುದು ಲೆಕ್ಕ ಪತ್ರ ಆಡಿಟ್ ಮಾಡಲು ಅವ್ಯವಹಾರ ನಡೆಸುತ್ತಿರುವ ಖಾಸಗಿ ದೇವಾಲಯಗಳನ್ನು ಸರ್ಕಾರದ ವಶಕ್ಕೆ ತೆಗೆದುಕೊಳ್ಳಲು ಅವಕಾಶ ಕಾಯಿದೆಯಲ್ಲಿ ಇದೆ.

ದೇವಾಲಯಗಳ ಸ್ಥಿರ ಮತ್ತು ಚರ ಸ್ವತ್ತುಗಳ ವಹಿಯನ್ನು ತಯಾರಿಸಿ ಸಂಬಂಧಿಸಿದ ಪ್ರಾಧಿಕಾರಿಯ ಅನುಮೋದನೆ ಪಡೆದು ದಾಖಲೆಯನ್ನು ಖಡ್ಡಾಯವಾಗಿ ಇಡಲು ಅವಕಾಶ ಮಾಡಿದೆ. ದೇವಾಲಯಗಳನ್ನು 3 ವಿಭಾಗಗಳಾಗಿ ವಿಂಗಡಿಸಿದ್ದು, ರೂ. 10.00 ಲಕ್ಷಕ್ಕಿಂತ ಹೆಚ್ಚು ಆದಾಯ ಇರುವ ದೇವಾಲಯಗಳ ಪ್ರಾಧಿಕಾರಿ ಧಾರ್ಮಿಕ ದತ್ತಿ ಆಯುಕ್ತರು ರೂ. 1.00 ಲಕ್ಷ ದಿಂದ 10.00 ಲಕ್ಷದವರೆಗಿನ ದೇವಾಲಯಗಳ ಪ್ರಾಧಿಕಾರಿಯು ಜಿಲ್ಲಾಧಿಕಾರಿಗಳು ರೂ. 1.00 ಲಕ್ಷಕ್ಕಿಂತ ಕಡಿಮೆ ಆದಾಯವುಳ್ಳ ದೇವಾಲಯಗಳ ಪ್ರಾಧಿಕಾರಿಯು ಸಹಾಯಕ ಆಯುಕ್ತರಾಗಿರುತ್ತಾರೆ. ಸಂಬಂಧಿಸಿದ ಜಿಲ್ಲೆಯ ಜಿಲ್ಲಾಧಿಕಾರಿಗಳು ಧಾರ್ಮಿಕ ದತ್ತಿ ಜಿಲ್ಲಾಧಿಕಾರಿಗಳಾಗಿ ಕಾರ್ಯ ನಿರ್ವಹಿಸುತ್ತಾರೆ. ಬೆಂಗಳೂರು ನಗರ, ಬೆಂಗಳೂರು ಗ್ರಾಮಾಂತರ, ಬೆಳಗಾವಿ, ಉತ್ತರ ಕನ್ನಡ, ಬಳ್ಳಾರಿ, ದಕ್ಷಿಣ ಕನ್ನಡ ಜಿಲ್ಲೆ ಮತ್ತು ಉಡುಪಿ ಜಿಲ್ಲೆಗಳಲ್ಲಿ ಧಾರ್ಮಿಕ ದತ್ತಿ ಇಲಾಖೆಯ ಸಹಾಯಕ ಆಯುಕ್ತರು ಹಾಗೂ ಪರಿವೀಕ್ಷಕರುಗಳು ಕಾರ್ಯನಿರ್ವಹಿಸುತ್ತಾರೆ. ಇತರೇ ಜಿಲ್ಲೆಗಳಲ್ಲಿ ಸಂಬಂಧಿಸಿರುವ ಉಪ ವಿಭಾಗಾಧಿಕಾರಿಗಳು ಹಾಗೂ ಕಂದಾಯ ಪರಿವೀಕ್ಷಕರು ಈ ಕಾಯಿದೆಯಡಿ ಕಾರ್ಯನಿರ್ವಹಿಸುತ್ತಾರೆ.

ರಾಜ್ಯದಲ್ಲಿ ಹೊಸ ಕ್ರೀಡಾಂಗಣಗಳ ನಿರ್ಮಾಣ

2453 (3217) : ಶ್ರೀ ಜಗದೀಶ್ ಶೆಟ್ಟರ್ (ಹುಬ್ಬಳ್ಳಿ ಗ್ರಾಮೀಣ) : ಮಾನ್ಯ ಯುವಜನ ಸೇವಾ ಹಾಗೂ ಕ್ರೀಡಾ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ರಾಜ್ಯದಲ್ಲಿ ಹೊಸದಾಗಿ ಕ್ರೀಡಾಂಗಣಗಳನ್ನು ನಿರ್ಮಿಸಲಾಗಿದೆಯೇ;

ಆ) ಹಾಗಿದ್ದರೆ, ಯಾವ ಯಾವ ಜಿಲ್ಲೆಗಳಲ್ಲಿ ನಿರ್ಮಿಸಲಾಗಿದೆ; (ಜಿಲ್ಲಾವಾರು ವಿವರ ನೀಡುವುದು);

ಇ) ಅಂತಹ ಕ್ರೀಡಾಂಗಣಗಳ ನಿರ್ಮಾಣಕ್ಕಾಗಿ ಆಗಿರುವ ಖರ್ಚು ಎಷ್ಟು; (ಜಿಲ್ಲಾವಾರು ವಿವರ ನೀಡುವುದು);

ಈ) ಉಳಿದ ಜಿಲ್ಲೆಗಳಲ್ಲಿ ಯಾವಾಗ ಕ್ರೀಡಾಂಗಣವನ್ನು ನಿರ್ಮಿಸಲಾಗುವುದು;

ಶ್ರೀ ಎಸ್.ಎಸ್. ಮಲ್ಲಿಕಾರ್ಜುನ್ (ಯುವಜನ ಸೇವಾ ಹಾಗೂ ಕ್ರೀಡಾ ರಾಜ್ಯ ಸಚಿವರು):

ಅ) ಹೌದು.

ಆ) ಹೊಸ ಜಿಲ್ಲೆಗಳಾದ ಚಾಮರಾಜನಗರ, ಗದಗ್, ಹಾವೇರಿ, ಉಡುಪಿ, ದಾವಣಗೆರೆ ಹಾಗೂ ಬಾಗಲಕೋಟೆ ಜಿಲ್ಲೆಗಳಲ್ಲಿ ಜಿಲ್ಲಾ ಕ್ರೀಡಾಂಗಣ ನಿರ್ಮಿಸಲಾಗುತ್ತಿದೆ.

ಇ)

	ಖರ್ಚುಗಳ ವಿವರ	ರೂ. ಲಕ್ಷಗಳಲ್ಲಿ
1.	ಚಾಮರಾಜನಗರ ಜಿಲ್ಲಾ ಕ್ರೀಡಾಂಗಣ	49.15
2.	ದಾವಣಗೆರೆ ಜಿಲ್ಲಾ ಕ್ರೀಡಾಂಗಣ	105.00
3.	ಉಡುಪಿ ಜಿಲ್ಲಾ ಕ್ರೀಡಾಂಗಣ	69.81
4.	ಬಾಗಲಕೋಟೆ ಜಿಲ್ಲಾ ಕ್ರೀಡಾಂಗಣ	25.00

5. ಹಾವೇರಿ ಜಿಲ್ಲಾ ಕ್ರೀಡಾಂಗಣ 65.00
6. ಗದಗ್ ಜಿಲ್ಲಾ ಕ್ರೀಡಾಂಗಣ 91.80

ಈ) ಸೂಕ್ತ ನಿವೇಶನ ದೊರಕಿದ ನಂತರ.

ಭೂಮಿ ಯೋಜನೆಯನ್ನು ಹೋಬಳಿ ಮಟ್ಟದಲ್ಲಿ ಅನುಷ್ಠಾನಗೊಳಿಸುವುದು

2454 (2707) : ಶ್ರೀ ಜಯಪ್ರಕಾಶ್ ಹೆಗ್ಡೆ. ಕೆ (ಬ್ರಹ್ಮಾವರ) : ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಕಂದಾಯ ಇಲಾಖೆಯ "ಭೂಮಿ" ಯೋಜನೆಯನ್ನು ತಾಲ್ಲೂಕು ಮಟ್ಟದಲ್ಲಿ ಅನುಷ್ಠಾನಗೊಳಿಸಿದಂತೆ, ಹೋಬಳಿ ಮಟ್ಟದಲ್ಲೂ ಅನುಷ್ಠಾನಗೊಳಿಸುವ ಯೋಜನೆ ಸರ್ಕಾರದ ಮುಂದಿದೆಯೇ;

ಆ) ಹೌದಾದಲ್ಲಿ, ಈ ಯೋಜನೆಯನ್ನು ಅನುಷ್ಠಾನಗೊಳಿಸಲು ಹಾಕಿಕೊಂಡ ಕಾಲಮಿತಿಯೇನು;

ಇ) ಇದಕ್ಕಾಗಿ ಮೀಸಲಿಟ್ಟ ಅನುದಾನವೆಷ್ಟು?

ಶ್ರೀ ಹೆಚ್.ಸಿ. ಶ್ರೀಕಂಠಯ್ಯ (ಕಂದಾಯ ಸಚಿವರು):

ಅ) ಸರ್ಕಾರವು ಈ ಯೋಜನೆಯನ್ನು ಈಗಾಗಲೇ ಹೋಬಳಿ ಮಟ್ಟದಲ್ಲಿಯೂ ಖಾಸಗಿಯವರ ಸಹ ಭಾಗಿತ್ವದೊಂದಿಗೆ ವಿಕೇಂದ್ರೀಕರಣ ಗೊಳಿಸಲಾಗಿದೆ.

ಆ) ದಿನಾಂಕ 4.7.2003ರಂದು ಈ ಬಗ್ಗೆ ಸರ್ಕಾರಿ ಆದೇಶವನ್ನು ಈಗಾಗಲೇ ಹೊರಡಿಸಲಾಗಿದೆ. ಗ್ರಾಮಾಂತರ ಪ್ರದೇಶಗಳಲ್ಲಿನ ಖಾಸಗಿ ಕಿಯಾಸ್ಕ ಮಾಲೀಕರು ಸಂಪರ್ಕ ಕಲ್ಪಿಸುವಂತೆ ಕೋರಿದಾಗ ಸಾರ್ವಜನಿಕರ ಸೇವೆಗಾಗಿ ಸಂಪರ್ಕವನ್ನು ಕಲ್ಪಿಸಲಾಗುವುದು. ರೈತಮಿತ್ರ ಕೇಂದ್ರಗಳ ಮೂಲಕ ಭೂ ದಾಖಲೆಗಳನ್ನು ಗ್ರಾಮದ ಮಟ್ಟದಲ್ಲಿ ವಿತರಿಸಲಾಗುವುದು.

ಇ) ಸಾರ್ವಜನಿಕರ ಸಹ ಭಾಗಿತ್ವದ ಯೋಜನೆಯೊಂದಿಗೆ ವಿಕೇಂದ್ರೀಕರಣಗೊಳಿಸಿ ಸರ್ಕಾರಕ್ಕೆ ವೆಚ್ಚ ತಗಲದ ರೀತಿಯಲ್ಲಿ ಡಾಟಾ ಸೆಂಟರ್‌ಗಳನ್ನು ಸ್ಥಾಪಿಸಲಾಗುವುದು. ಈ ಡಾಟಾ ಸೆಂಟರನ್ನು ಕೇಂದ್ರ ಸರ್ಕಾರದ ನೆರವಿನಿಂದ ಸ್ಥಾಪಿಸಲು ಉದ್ದೇಶಿಸಲಾಗಿದೆ. ಡಾಟಾ ಸೆಂಟರನ್ನು ಸ್ಥಾಪಿಸುವ ತನಕ ತಾಲ್ಲೂಕು ಸರ್ವರಗಳಿಗೆ ದೂರವಾಣಿ ಲೈನ್ ಮೂಲಕ ಕಿಯಾಸ್ಕ್ ಮಾಲೀಕರುಗಳಿಗೆ ಸಂಪರ್ಕವನ್ನು ಕಲ್ಪಿಸಲಾಗುವುದು.

ಪುರಸಭಾ ವ್ಯಾಪ್ತಿಯೊಳಗಿನ ಅಕ್ರಮ-ಸಕ್ರಮ ಯೋಜನೆ

2455 (2708) : ಶ್ರೀ ಕೆ. ಜಯಪ್ರಕಾಶ್ ಹೆಗ್ಡೆ (ಬ್ರಹ್ಮಾವರ) : ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಪುರಸಭಾ ವ್ಯಾಪ್ತಿಯ 5 ಕಿಲೋಮೀಟರ್ ಗಡಿಯೊಳಗಿನ ಅರ್ಜಿಗಳನ್ನು ಅಕ್ರಮ-ಸಕ್ರಮ ಯೋಜನೆಯಡಿಯಲ್ಲಿ ಮಂಜೂರು ಮಾಡಲು ಅವಕಾಶ ಇದೆಯೇ;

ಆ) ಅವಕಾಶ ಇಲ್ಲವಾದಲ್ಲಿ ಇದಕ್ಕೆ ಕಾರಣಗಳೇನು?

ಶ್ರೀ ಹೆಚ್.ಸಿ. ಶ್ರೀಕಂಠಯ್ಯ (ಕಂದಾಯ ಸಚಿವರು):

ಅ) ಇಲ್ಲ.